ದಿನಾಂಕ 02-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 1, 4 ರಿಂದ 7 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಎಂ ವಕೀಲರಿಂದ:**

6. ನಿ.ಪಿ-17 ರ ತಕರಾರನ್ನು 1 ನೇ ಪ್ರತಿವಾದಿಯು ಮಾನ್ಯ ತಹಶೀಲ್ದಾರವರಿಗೆ ಸಲ್ಲಿಸಿರುತ್ತಾರೆ. ಸಾಕ್ಷಿಗೆ ಈ ದಾವೆಯಲ್ಲಿ 1 ನೇ ಪ್ರತಿವಾದಿಯ ಪರವಾಗಿ ವಕೀಲರು ಸಲ್ಲಿಸಿರುವ ವಕಾಲತ್ತಿನಲ್ಲಿ ಅದನ್ನು ಬರೆದುಕೊಟ್ಟ ಪಕ್ಷಕಾರರ ಸಹಿಯನ್ನು ತೋರಿಸಿ ಅದು ಯಾರ ಸಹಿ ಎಂದು ಕೇಳಲಾಗಿ ಸಾಕ್ಷಿಯು ಅದು ಯಾರ ಸಹಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಕಾಲತ್ತಿನಲ್ಲಿ ಇರುವ ಪಕ್ಷಕಾರನ ಸಹಿಗೂ ಮತ್ತು ನಿ.ಪಿ-17 ರ ತಕರಾರಿನಲ್ಲಿ ಇರುವ ಸಹಿಯು ವ್ಯತ್ಯಾಸ ಇರುತ್ತವೆ. ನಿ.ಪಿ-17 ರ ತಕರಾರು ಅರ್ಜಿದಾರರ ಸಹಿಯು ಮತ್ತು ನಿ.ಪಿ-24 ರ ಭೂಮಿ ಅರ್ಜಿ ಸ್ವೀಕೃತಿಯಲ್ಲಿ ಇರುವ ಸಹಿಯು ಒಂದೇ ಸಹಿ ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ತಕರಾರು ಅರ್ಜಿಯಲ್ಲಿ ಯಾವ ಸರ್ವೇ ನಂಬರ್ ಗೆ ಸಂಬಂಧಿಸಿದಂತೆ ತಕರಾರು ಸಲ್ಲಿಸಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ.

7. ಉಪತಹಶೀಲ್ದಾರ, ನಾಡಕಛೇರಿ, ಆರ್.ಟಿ.ಡಿ.ಎಸ್ ಸಂ: 24/2014-15 ರ ಪ್ರಕರಣದಲ್ಲಿ ಕುಟುಂಬದಲ್ಲಿ ಆದ ವಿಭಾಗಕ್ಕೆ ಸಂಬಂಧಿಸಿದಂತೆ ನೋಂದಾಯಿತ ವಿಭಾಗ ಪತ್ರ ಆಗಿರದೇ ಇರುವುದರಿಂದ ಪರಿಗಣಿಸಲು ಬರುವುದಿಲ್ಲ ಎಂದು ಪ್ರಕರಣವನ್ನು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿ.ಪಿ-15 ರ ಆದೇಶದ ಹಾಳೆಗೆ 1 ನೇ ಪ್ರತಿವಾದಿ ಮಲ್ಲಪ್ಪ ಮಲಕಣ್ಣನವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ಆತನ ಸಹಿ ಅಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ 1 ನೇ ಪ್ರತಿವಾದಿಯು ಸದರಿ ಕಂದಾಯ ಪ್ರಕರಣದಲ್ಲಿ ಹಾಜರು ಇದ್ದರೋ ಅಥವಾ ಇಲ್ಲವೋ

ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿಯು ಹಾಜರಿದ್ದು, ಅದಕ್ಕೆ ಆತನೇ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಿ.ಪಿ-17 ಮತ್ತು 24 ರ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ 1 ನೇ ಪ್ರತಿವಾದಿಯ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸಹಿಗಳನ್ನು ನಿ.ಪಿ-17 ರ ತಕರಾರು ಅರ್ಜಿಗೆ ಫೋರ್ಜರಿ ಮಾಡಿದ ವಿಷಯವು ಆತನ ಗಮನಕ್ಕೆ ಬಂದ ಕೂಡಲೇ ಆಡೂರು ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿರ್ಯಾದನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ.

8. ಶಂಕ್ರಿಕೊಪ್ಪ ಗ್ರಾಮದ ಸ ನಂಃ 88/3 ಅ, ಸ ನಂಃ 24/1 ಮತ್ತು ವಿಪಿಸಿ ಆಸ್ತಿ ಸಂಃ 201/2 ನನ್ನ ತಂದೆಯ ಹಿಸ್ಸೇಗೆ ಬಂದಿರುತ್ತವೆ ಎಂದರೆ ಸರಿ. ಸಾಕ್ಷಿ



ಮುಂದುವರೆದು ನನ್ನ ಅಜ್ಜ ಸತ್ತ ನಂತರ ನನ್ನ ತಂದೆಯ ಹಿಸ್ಸೇಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ನನಗೆ ದಾವಾ ಆಸ್ತಿಯಲ್ಲಿ ಮಾತ್ರ ಹಕ್ಕು ಇರುವುದರಿಂದ, ಸದರಿ ಆಸ್ತಿಗಳನ್ನು ಸೇರಿಸುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಒಟ್ಟು ಕುಟುಂಬಕ್ಕೆ ಹಿರಿಯವ್ವ ರವರು ಸಹ ಸದಸ್ಯೆ ಇದ್ದರೂ ಆಕೆಯ ಮಕ್ಕಳನ್ನು ವಂಶವೃಕ್ಷದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಆಕೆಯ ಮದುವೆ ಕಾಲದಲ್ಲಿ ಹಣ ಮತ್ತು ವಡವೆಗಳನ್ನು ನೀಡಿರುವುದರಿಂದ ಮತ್ತು ಆಕೆಗೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ವಂಶವೃಕ್ಷದಲ್ಲಿ ಕಾಣಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 15-10-2014 ರ ನೋಂದಾಯಿತ ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯು ಯಾವುದೇ ತಕರಾರು ಅರ್ಜಿಯನ್ನು ಸಲ್ಲಿಸದೇ ಇದ್ದರೂ, ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಡ ಸಂಃ 678 ರ ಪ್ರಕಾರ 1984 ರಲ್ಲಿಯೇ ನನ್ನ ತಂದೆಗೆ ಒಟ್ಟು ಕುಟುಂಬದಲ್ಲಿ ಬರಬೇಕಾದ ಹಿಸ್ಸೇಯ ಆಸ್ತಿಗಳು ಬಂದಿದ್ದು, ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಿಸ್ಸೇಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ